ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

# ಜೈನ್ ವಿಶ್ವವಿದ್ಯಾಲಯಕ್ಕೆ ವಿದೇಶಿಗರ ತಂಡ



ಬೆಂಗಳೂರು, ಜೂ.19- ಯುನೈಟೆಡ್ ಕಿಂಗ್ ಡಮ್ ನಂತಹ ರಾಷ್ಟ್ರದಿಂದ ಭಾರತದ ಜೈನ್ ವಿಶ್ವವಿದ್ಯಾಲಯಕ್ಕೆ ಭಾರತೀಯ ಮನಃಶಾಸ್ತ್ರ, ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ತಿರುಳನ್ನು ಅಧ್ಯಯನ ಮಾಡಲು ಎಗ್ಸೆಟರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಆಗಮಿಸಿದ್ದಾರೆಂದರೆ ಅದು ನಮ್ಮ ದೇಶದಲ್ಲಿ ಬೇರೂರಿರುವ ಸಂಸ್ಕೃತಿಯ ಆಳವನ್ನು ಎತ್ತಿ ಹಿಡಿಯುತ್ತದೆ.

ಇತ್ತೀಚಿನ ವರದಿಯೊಂದರ ಪ್ರಕಾರ, ಪ್ರಪಂಚದ49ನೇ ಅತ್ಯುತ್ತಮ ವಿಶ್ವವಿದ್ಯಾಲಯವೆಂದು ತನ್ನ ಶೈಕ್ಷಣಿಕ ಗುಣಮಟ್ಟಕ್ಕೆ ಹೆಸರುವಾಸಿಯಾಗಿರುವ ಎಗ್ಸೆಟರ್ ವಿಶ್ವವಿದ್ಯಾಲಯ ಹಾಗೂ ದಕ್ಷಿಣ ಭಾರತದ 1ನೇ ಅತ್ಯುತ್ತಮ ಖಾಸಗಿ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿರುವ ಜೈನ್ ವಿಶ್ವವಿದ್ಯಾಲಯ, ಒಡಂಬಡಿಕೆಯೊಂದಕ್ಕೆ ಸಹಿ ಹಾಕಿತು.

ಈ ಒಡಂಬಡಿಕೆಯ ಫಲವಾಗಿ ಎಗ್ಸೆಟರ್ ವಿಶ್ವವಿದ್ಯಾಲಯ ಗ್ರಾಂಡ್ ಚಾಲೆಂಜ್ ವೀಕ್ ಎನ್ನುವ ವಿದ್ಯಾರ್ಥಿ ವಿಚಾರ ವಿನಿಮಯ ಕಾರ್ಯಕ್ರಮದ ಸಲುವಾಗಿ ತನ್ನ ಇತಿಹಾಸ ವಿಭಾಗದ ವಿದ್ಯಾರ್ಥಿಗಳ ಬೌದ್ಧಿಕ ಹಾಗೂ ಮಾನಸಿಕ ವಿಕಾಸಕ್ಕಾಗಿ ಭಾರತಕ್ಕೆ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡಿತು.

ಈ ಸಂದರ್ಭದಲ್ಲಿ 11 ವಿದ್ಯಾರ್ಥಿಗಳನ್ನೊಳಗೊಂಡ ತಂಡ ಜೈನ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ವೃತ್ತಿಪರ, ಕೌಟುಂಬಿಕ ಹಾಗೂ ಐತಿಹಾಸಿಕ ದೃಷ್ಟಿಕೋನಗಳ ಮೂಲಕ ದೇಶದ ಸಾಂಸ್ಕೃತಿಕ ಬೆಳವಣಿಗೆಯ ವಿಚಾರವಾಗಿ ತಮ್ಮ ಅಧ್ಯಯನವನ್ನು ನಡೆಸಿದರು. ಜೈನ್ ವಿಶ್ವವಿದ್ಯಾಲಯದ ಮನಃಶಾಸ್ತ್ರ ವಿಭಾಗ ವಿಶೇಷವಾಗಿ ಆಯೋಜಿಸಿದ್ದ ಕಾರ್ಯಕ್ರಮಗಳಲ್ಲಿ ಎಗ್ಸೆಟರ್ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು, ಅತ್ಯಮೂಲ್ಯ ವಿಚಾರಗಳನ್ನು ಗ್ರಹಿಸಿದರು.

ಅಲ್ಲದೇ ಜೈನ್ ವಿಶ್ವವಿದ್ಯಾಲಯದ ಮಾನವಶಾಸ್ತ್ರ ಮತ್ತು ಸಮಾಜ ವಿಜ್ಞಾನ ವಿಭಾಗದ ಪ್ರಾಧ್ಯಾಪಕರ ಮಾರ್ಗದರ್ಶನದ ಮೇರೆಗೆ ಓಂ ಶಾಂತಿಧಾಮದಂತಹ ಆಧ್ಯಾತ್ಮಿಕ ಕೇಂದ್ರಕ್ಕೆ ಭೇಟಿ ನೀಡುವ ಮೂಲಕ ವೇದ ಪರಂಪರೆಯ ನೈಜ ದರ್ಶನಕ್ಕೆ ವಿದ್ಯಾರ್ಥಿಗಳು ಸಾಕ್ಷಿಯಾದರು.

ಭಾರತದ ಬೆನ್ನೆಲುಬಾದ ಹಳ್ಳಿಗಳು ಇಂದಿಗೂ ನಮ್ಮ ದೇಶದ ಜೀವನಾಡಿ. ಮುಂಬೈ, ಬೆಂಗಳೂರಿನಂತಹ ನಗರ ಜೀವನದ ಮೂಲಕ ಪರಿಚಯವಾಗಿದ್ದ ಭಾರತವನ್ನು, ಹಳ್ಳಿಗಳ ಸೊಗಡಿನ ಮೂಲಕ, ಸಾವಿರಾರು ವರ್ಷಗಳ ಇತಿಹಾಸವಿರುವ ಭವ್ಯ ರಾಷ್ಟ್ರವಾಗಿ ವಿದೇಶಿಯರ ಮನಮುಟ್ಟಿಸುವುದು, ಜೈನ್ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಪೈಕಿ ಒಂದಾಗಿತ್ತು.

ಕೊಟ್ಟ ಮನೆಯ ಪರಿಕಲ್ಪನೆಯನ್ನು ಬೆರಗಾಗಿ ನೋಡುತ್ತಾ, ಸಿಹಿ ಎಳನೀರನ್ನು ಸವಿಯುತ್ತಾ, ಕಡಲೆಕಾಯಿಯನ್ನು ಬೆಲ್ಲದೊಂದಿಗೆ ಮೆಲ್ಲುತ್ತಾ, ಹಳ್ಳಿಯ ಹಸಿರ ವಾತಾವರಣದಲ್ಲಿ ಭಾರತ ದರ್ಶನವನ್ನು ಮಾಡಿದ್ದು ಎಕ್ಸೆಟರ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ನಿಜಕ್ಕೂ ಅಗಮ್ಯ, ಅಪರೂಪದ ಅನುಭವವಾಗಿಯೇ ಗೋಚರಿಸಿತು.